
# ಕೆಂಬಾವುಟ

## ವಿಶೇಷ ಸಂಚಿಕೆ

## 2021



ಕೆಂಬಾವುಟ

ವಿಶೇಷಾಂಕ 2021

ಸಂಪುಟ : 48

ಸಂಚಿಕೆ : 1–4

ಬೆಲೆ : ರೂ. 40/–

ಒಟ್ಟು ಪುಟಗಳು: 150

ದಿನಾಂಕ: 29–08–2021

# ಪರಿವಿಡಿ


| | | |
|---|---|---|
| ಸಂಕಷ್ಟಕ್ಕೆ ಒಳಗಾಗಿರುವ ಜನತೆಗೆ... | ಶಿವರಾಜ ರಾ. ಬಿರಾದಾರ | 5 |
| ಗೋಡೆಗಳು ಮರೆಮಾಚುವುದಿಲ್ಲ | ಸಾತಿ ಸುಂದರೇಶ್ | 6 |
| 'ನಿಮ್ಮ ಮಹಾರಾಜರು ಆನೆಗೆ ಚಡ್ಡಿ... | ಡಾ॥ ಸಿದ್ದನಗೌಡ ಪಾಟೀಲ | 9 |
| ಕೊರೋನ ವೈರಸ್ ಮಾನವ ನಿರ್ಮಿತವೋ ಅಥವ... | ಎಮ್.ಸಿ. ಡೋಂಗ್ರೆ | 19 |
| ನೂತನ ಶಿಕ್ಷಣ ನೀತಿ – 2020 | ಡಾ॥ ಜಿ. ರಾಮಕೃಷ್ಣ | 41 |
| ಜೀವಕೆ ಬೆಲೆ ಎಲ್ಲಿ... | ಜ್ಯೋತಿ ಎ. | 63 |
| ಕೋವಿಡ್–19ನ್ನು ಎದುರಿಸಿದ ಕೇರಳ ಮಾದರಿ | ಹೆಚ್.ವಿ. ರಾವ್ | 75 |
| ಅಮೃತ ಮಹೋತ್ಸವಕ್ಕೆ ಸಜ್ಜಾಗುವ ಮುನ್ನ | ನಾ ದಿವಾಕರ | 87 |
| ಪೆರುವಿನಲ್ಲಿ ಪುನಃ ಸಮಾಜವಾದಿ ಸರ್ಕಾರ | ಮ. ಶ್ರೀ.ಮುರಳಿ ಕೃಷ್ಣ | 93 |
| ಕೋವಿಡ್॥ ಮಹಿಳೆಗೆ ಹೊರೆಯ... | ಪಿ. ಷಣ್ಮುಖಸ್ವಾಮಿ | 100 |
| ಕೊರೋನ ದಿನಗಳ ರಾಜಕೀಯ... | ಡಾ. ಪ್ರಕಾಶ ದೇಸಾಯಿ | 111 |
| ಅವಿರತ ಹೋರಾಟಗಾರ,... | ವಿ. ಕುಕ್ಯಾನ್ | 117 |
| ಹೊಸ ಮೌಢ್ಯ ಹುಟ್ಟುಹಾಕಿದ... | ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ | 125 |
| ಕೊರೋನ ಸಂಕಟದಲ್ಲಿ ಕೈಬಿಟ್ಟ ಸರ್ಕಾರಗಳು | ಡಾ. ಮಂ.ಜುನಾಥ್ | 133 |
| ಕಾರ್ಮಿಕ ಸಂಘಟನೆಗಳ ಪ್ರಸ್ತುತ... | ಶ್ರಮಜೀವಿ | 139 |
| ರಾಷ್ಟ್ರೀಯ ಶಿಕ್ಷಣ ನೀತಿ 2019.... | ಡಾ. ಕಾ. ವೆಂ. ಶ್ರೀನಿವಾಸಮೂರ್ತಿ | 143 |
| ಕವನಗಳು – 81, 91, 99, 115, 123, 141, 145 | | |


ಸಂಪಾದಕರು
ಶಿವರಾಜ ರಾ. ಬಿರಾದಾರ

ಸಂಪಾದಕ ಮಂಡಳಿ
ಪಿ. ವಿ. ಲೋಕೇಶ್
ಮ. ಶ್ರೀ ಮುರಳಿ ಕೃಷ್ಣ
ಎಚ್. ವಿ. ರಾವ್
ಜ್ಯೋತಿ ಎ.
ಪಿ. ಷಣ್ಮುಖಸ್ವಾಮಿ
ಎಂ. ಸಿ. ಡೋಂಗ್ರೆ
ಬಿ. ಅಮ್ಜದ್
ಅಶ್ವತ್ಥ್ ನಾರಾಯಣ್

# ಕೊರೋನ ದಿನಗಳ ರಾಜಕೀಯ ನಿರೂಪಣೆಗಳು



ಡಾ. ಪ್ರಕಾಶ ದೇಸಾಯಿ

ರಾಜಕೀಯ ನಿರೂಪಣೆಗಳು ಜನರ ಕಲ್ಯಾಣಕ್ಕಾಗಿ ಬಂದಿರುವುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಅವುಗಳು ಅಮಾಯಕ ಜನರನ್ನು ಬಲಿತೆಗೆದುಕೊಂಡದ್ದು. ಈ ವಿಷಯದಲ್ಲಿ ಯಾವುದೇ ನಿರೂಪಣೆಗೂ ವಿನಾಯಿತಿ ಕೊಡಲಿಕ್ಕಾಗುವದಿಲ್ಲ. ನಿರೂಪಣೆಗಳ ಅರ್ಥವಿವರಣೆಯನ್ನು ತಪ್ಪಾಗಿ ಮಾಡಿದರೆ ಈ ಅನಾಹುತಗಳು ನಡೆಯುತ್ತವೆ. ನಮ್ಮ ದೇಶದಲ್ಲಿ ಈಗ ನಡೆಯುತ್ತಿರುವುದು ಇಂತಹ ಅನಾಹುತವೇ. ದೇಶದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯ ಕುರಿತು ಸುಳ್ಳು ಹೇಳಿ ಸತ್ಯವನ್ನು ಮುಚ್ಚಿಹಾಕಿ ಸುಳ್ಳನ್ನೇ ಸತ್ಯವೆಂದು ಜನ ನಂಬುವಂತೆ ಮಾಡುವ ಭಾರತೀಯ ಜನತಾ ಪಕ್ಷದ ಇತ್ತೀಚಿನ ಪ್ರಯತ್ನಗಳು ಬಯಲಿಗೆ ಬಂದವು. ದೇಶದ ಅನೇಕ ಪ್ರಾಂತ್ಯಗಳಲ್ಲಿ ಕೊರೋನ ವೈರಸ್ ರೋಗದ ಎರಡನೇ ಅಲೆಯ ದಿನಗಳಲ್ಲಿ ನಡೆದ ಸಾವು–ನೋವುಗಳು ಸುಳ್ಳು ನಿರೂಪಣೆಗಳನ್ನು ನೈಜ ಸುಳ್ಳುಗಳೆಂದು ಸಾಬೀತು ಮಾಡಿದವು. ಕೊರೋನ ದಿನಗಳ ರಾಜಕೀಯ ನಿರೂಪಣೆಯಲ್ಲಿರುವ ಸುಳ್ಳುಗಳನ್ನು ತಿಳಿಯುವ ಪ್ರಯತ್ನ ಮತ್ತು ಸಾಮಾನ್ಯ ಜನ ಸುಳ್ಳುಗಳನ್ನು ನಂಬುವುದಿಲ್ಲವೆಂದು ತಿಳಿಸುವ ಪ್ರಯತ್ನ ಈ ಕಿರು ಪ್ರಬಂಧದಲ್ಲಿ ಮಾಡಲಾಗಿದೆ.

ಅಭಿವೃದ್ಧಿ ಮಾದರಿ ಕುರಿತ ಸುಳ್ಳುಗಳು: ನರೇಂದ್ರ ಮೋದಿಯವರು ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮತ್ತು ಅವರು ಪ್ರಧಾನಮಂತ್ರಿಯಾದ ದಿನದಿಂದ ಆ ರಾಜ್ಯದ ಅಭಿವೃದ್ಧಿ ಮಾದರಿಯ ಕುರಿತು ಮಾಧ್ಯಮಗಳಲ್ಲಿ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಬಹಳ ಚರ್ಚೆಯಾಗಿದೆ. ಈ ಮಾದರಿಯ ಬಗ್ಗೆ ಬಹಳಷ್ಟು ಜನ ಗುಣಗಾನ ಮಾಡಿದ್ದುಂಟು. ಹೆಚ್ಚಿನ ದುರಂತವೇನಂದರೆ, ಸಂಶೋಧನಾ ಕ್ಷೇತ್ರಗಳಲ್ಲಿ ದಿಗ್ಗಜರು ಎಂದು ಕರೆದುಕೊಂಡವರು ಕೂಡಾ ಇದರ ಬಗ್ಗೆ ಪ್ರಶಂಸೆ ಮಾಡಿದ್ದರು. ಇದೇ ವಸ್ತು–ವಿಷಯವನ್ನು ಭಾರತೀಯ ಜನತಾ ಪಕ್ಷದ ನಾಯಕರು ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಬಳಸಿಕೊಂಡು ಆಯಾ ರಾಜ್ಯಗಳಲ್ಲಿ ಗುಜರಾತ್ ಮಾದರಿಯ ಅಭಿವೃದ್ಧಿಯನ್ನು ತರಲಾಗುತ್ತದೆ ಎಂದು ಜನರಿಗೆ ತಿಳಿಸಿ ಮತದಾರರನ್ನು ನಂಬಿಸಿದ್ದುಂಟು. ಬಹುತೇಕ ಜನರು ಇದನ್ನು ನಂಬಿ ಭಾರತೀಯ ಜನತಾ ಪಕ್ಷದ ಸರ್ಕಾರವನ್ನು ಅಪೇಕ್ಷಿಸಿ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದರು. ಜನತೆಯ ಬೆಂಬಲದ ಪರಿಣಾಮವಾಗಿ ಭಾಜಪವು ಅನೇಕ ರಾಜ್ಯಗಳಲ್ಲಿ ಸರ್ಕಾರವನ್ನು ರಚಿಸಿತು. ಕೊರೋನ ರೋಗದ ಪ್ರಾರಂಭದ ದಿನಗಳಲ್ಲಿ ಮತ್ತು ನಂತರದ ಸಮಯದಲ್ಲಿ ಭಾಜಪ ಸರ್ಕಾರವಿರುವ ರಾಜ್ಯಗಳಲ್ಲಿ ಸಾಮಾನ್ಯ ಜನತೆಯ ಸಾವು–ನೋವಿನ ಘಟನೆಗಳನ್ನು ತಿಳಿದುಕೊಂಡಾಗ ಈ ರಾಜ್ಯಗಳ ಆಡಳಿತ ಮತ್ತು ಅಭಿವೃದ್ಧಿಯ ಆರೋಗ್ಯ ಸರಿಯಿಲ್ಲವೆಂದು ಗೊತ್ತಾಯಿತು. ಸಾಮಾನ್ಯ ಜನರು, ವಿಶೇಷವಾಗಿ ಕೊರೋನ ರೋಗದ ಎರಡನೇ ಅಲೆಯ ದಿನಗಳಲ್ಲಿ ಮೂಲಭೂತ ವೈದ್ಯಕೀಯ ಸೌಕರ್ಯಗಳಿಲ್ಲದೆ ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಅಭಿವೃದ್ಧಿ ಕುರಿತು ರಾಜಕೀಯ ಶಕ್ತಿಗಳು ಹೇಳಿರುವ ಸುಳ್ಳುಗಳನ್ನು ಸಾಮಾನ್ಯ ಜನರು ತಾವೇ ಖುದ್ದಾಗಿ ತಿಳಿಯಲು ಕೊರೋನ ರೋಗದ ಅಲೆಗಳು ಪರೋಕ್ಷವಾಗಿ ಪಾತ್ರ ವಹಿಸಿದವು. ಗುಜರಾತ್ ಮಾದರಿಯ ಆಡಳಿತ ಮತ್ತು ಅಭಿವೃದ್ಧಿ ಕೊಡುತ್ತೇವೆ ಎಂದು ಹೇಳಿಕೊಂಡು ಭಾಜಪ ಸರ್ಕಾರ ರಚನೆ ಮಾಡಿರುವ ಅನೇಕ ರಾಜ್ಯಗಳಲ್ಲದೆ ಸ್ವತ: ಗುಜರಾತ್ ರಾಜ್ಯದಲ್ಲಿಯೇ ವೈದ್ಯಕೀಯ ಸೌಕರ್ಯಗಳ ಕೊರತೆಯಿಂದ ಸಾಮಾನ್ಯ ಜನರು ಬಹಳಷ್ಟು ಕಷ್ಟಕ್ಕೆ ಒಳಗಾದರು. ಆಸ್ಪತ್ರೆಗಳ ಕೊರತೆ, ಆಮ್ಲಜನಕ ಕೊರತೆ, ಇತ್ಯಾದಿಗಳಿರುವುದು ಇಲ್ಲಿ ಕಂಡುಬಂದವು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಮತ್ತು ಭಾಜಪದ ಮುಖ್ಯ ಪ್ರಚಾರಕರಾದ ಆದಿತ್ಯನಾಥರವರು ಇತರ ರಾಜ್ಯಗಳಲ್ಲಿ ತಮ್ಮ ರಾಜಕೀಯ ಪ್ರವಾಸವನ್ನು ಕೈಗೊಂಡಾಗ ಸುಳ್ಳಿನ ಸುರಿಮಳೆಯನ್ನೇ ಸುರಿಸಿದರು. ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಾ ತಮ್ಮ ರಾಜ್ಯದ ಮಾದರಿಯನ್ನು ಗುಣಗಾನ

ಮಾಡಿ ಕೇರಳದಂತಹ ರಾಜ್ಯದ ಅಭಿವೃದ್ಧಿ ಮಾದರಿಯನ್ನು ವಿಮರ್ಶಿಸಿದರು. ಕಳೆದ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಗಳಲ್ಲಿ ಉತ್ತರಪ್ರದೇಶದ ಗ್ರಾಮಾಂತರ ಭಾಗಗಳ ಜನರು ವೈದ್ಯಕೀಯ ಸೌಕರ್ಯಗಳ ಕೊರತೆಯ ಕಾರಣ ಅನೇಕ ತೊಂದರೆಗೆ ಒಳಗಾದ ವಿಷಯ ನಮ್ಮೆಲ್ಲರಿಗೆ ಗೊತ್ತಿದೆ. ಸೌಕರ್ಯಗಳ ಕೊರತೆಯನ್ನು ಸುದ್ದಿ ಮಾಡದ ಹಾಗೆ ಅಲ್ಲಿನ ಅಧಿಕಾರಶಾಹಿಯೂ ಬಹಳ ಪ್ರಯತ್ನಪಟ್ಟಿತು. ಈ ವಿಷಯದ ಕುರಿತು ಅನೇಕ ಸ್ಥಳೀಯ ಮಾಧ್ಯಮ ಮತ್ತು ವರದಿಗಾರರು ಅಲ್ಲಿನ ಆಡಳಿತದಿಂದ ತೊಂದರೆಗೆ ಒಳಗಾದರು. ಕೆಲವು ಸ್ಥಳೀಯ ಮತ್ತು ವಿದೇಶಿ ಮಾಧ್ಯಮಗಳು ಸೌಕರ್ಯಗಳ ಕೊರತೆಯಿಂದ ಉಂಟಾದ ಸಾವು–ನೋವುಗಳ ಬಗ್ಗೆ ಸುದ್ದಿ ಮಾಡಿದಾಗ ಅಲ್ಲಿರುವ ನೈಜ ಅಭಿವೃದ್ಧಿಯ ಬೆಳಕಿಗೆ ಬಂದಿತು. ಈ ರಾಜ್ಯದ ಹಲವಾರು ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತವಾದ ಸರ್ಕಾರಿ ಆಸ್ಪತ್ರೆಗಳು ಈಗಲೂ ಕಂಡುಬರುವುದಿಲ್ಲ. ಕೇವಲ ಕಟ್ಟಡಗಳಿದ್ದರೆ ಸಾಲದು. ಅವುಗಳಲ್ಲಿ ಎಲ್ಲ ಸೌಲಭ್ಯಗಳು ಕೂಡಾ ಇರಬೇಕು. ತಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಹುಳುಕನ್ನು ಇಟ್ಟುಕೊಂಡು ಮತ್ತೊಂದು ಪ್ರದೇಶದ ಅಭಿವೃದ್ಧಿಯ ಬಗ್ಗೆ ವಿಮರ್ಶಿಸುವ ನಾಯಕರನ್ನು ಜನಪರ ಕಳಕಳಿ ಇಲ್ಲದವರು ಎಂದು ಕರೆಯಬೇಕಾಗುತ್ತದೆ. ಒಟ್ಟಾರೆ, ಕೊರೋನ ಎರಡನೇ ಅಲೆಯು ವಿಶೇಷ ಮಾದರಿಯ ರಾಜ್ಯಗಳ ಅಭಿವೃದ್ಧಿ ನೈಜತೆಯನ್ನು ಇನ್ನೂ ಹೆಚ್ಚಿಗೆ ತೆರೆದಿಟ್ಟಿತು. ಇಲ್ಲಿ ಹೇಳಲೇಬೇಕಾದ ಇನ್ನೊಂದು ಮಾತೆಂದರೆ, ದೇಶವನ್ನು ವಿಶ್ವಗುರು ಮಾಡಲು ಹೊರಟಿದ್ದ ಮೋದಿ–ಶಾ ಜೋಡಿಯು ವಿಕೋಪಗಳ ಪರಿಸ್ಥಿತಿಯಲ್ಲಿ ದೇಶದ ಜನರನ್ನು ರಕ್ಷಿಸುವಂತಹ ಅಭಿವೃದ್ಧಿ ಮಟ್ಟ ಮತ್ತು ಸಾಮರ್ಥ್ಯ ಕಡೆಗೆ ಹೆಚ್ಚಿನ ಗಮನ ಕೊಡದೆ ಜನಸಾಮಾನ್ಯರಿಗೆ ಅನ್ಯಾಯ ಮಾಡಿತು.

ಕೊರೋನ ವಿಶ್ವವ್ಯಾಪಿ ಸಾಂಕ್ರಾಮಿಕ ದಿನಗಳ ಕಠಿಣ ಸಮಯದಲ್ಲಿ ದೇಶದ ಸಾಮಾನ್ಯ ಜನರಿಗೆ ಅವಶ್ಯವಾಗಿರುವ ಮೂಲ ಸೌಕರ್ಯಗಳನ್ನು ಒದಗಿಸದೆ ಮಂದಿರ ನಿರ್ಮಾಣ, ನೂತನ ಸಂಸತ್ ಭವನ ನಿರ್ಮಾಣ ಇತ್ಯಾದಿ ವಿಷಯಗಳು ಭಾಜಪ ಸರ್ಕಾರಕ್ಕೆ ಪ್ರಾಮುಖ್ಯವಾಗಿವೆ. ಭಾಜಪ ನಾಯಕರುಗಳ ವಿಶ್ವಗುರು ಸ್ಥಾನದ ಮಾತು ಕೇವಲ ಹುಚ್ಚು ಭ್ರಮೆಯಲ್ಲದೇ ದೇಶದ ಸಾಮಾನ್ಯ ಜನರಿಗೆ ಅವರು ಮಾಡುತ್ತಿರುವ ಅನ್ಯಾಯವೆಂದು ಹೇಳಬಹುದು. ದೇಶದ ಸಾಮಾನ್ಯಜನರಿಗೆ ಅವಶ್ಯಕತೆಯಿರುವ ಸೌಕರ್ಯಗಳನ್ನು ಒದಗಿಸದ ದೇಶವು ಎಂದಾದರೂ ವಿಶ್ವಗುರುವಾಗಲು ಸಾಧ್ಯವೇ? ನೂತನ ಭವನಗಳು ಮತ್ತು ಮಂದಿರಗಳು ದೇಶದ ಅಭಿವೃದ್ಧಿಯ ಸಂಕೇತಗಳೇ? ಈ ಪ್ರಶ್ನೆಗಳಿಗೆ ನಾವೆಲ್ಲಾ ನಮ್ಮರಿವಿನಿಂದ ಉತ್ತರಗಳನ್ನು ಹುಡುಕಬೇಕು ಮತ್ತು ರಾಜಕೀಯ ನಾಟಕಗಳನ್ನು ತೆರೆದಿಡಬೇಕು.

ಧರ್ಮ, ವೈಜ್ಞಾನಿಕತೆ ಮತ್ತು ಆರೋಗ್ಯ ಸಮಸ್ಯೆಗಳು: ಧರ್ಮ ಮತ್ತು ವೈಜ್ಞಾನಿಕತೆಯ ನಡುವೆ ಅನಾದಿ ಕಾಲದಿಂದಲೂ ವೈಚಾರಿಕ ಕಾಳಗಗಳು ನಡೆಯುತ್ತಲೇ ಬಂದಿವೆ. ಯುರೋಪಿನ ಇತಿಹಾಸದಲ್ಲಿ ಇದರ ಕುರಿತು ಹಲವು ಬಾರಿ ಹಿಂಸಾತ್ಮಕ ಘಟನೆಗಳು ನಡೆದಿವೆ. ಭಾರತದ ಧಾರ್ಮಿಕ ಮೂಲಗಳಲ್ಲಿ ವೈಜ್ಞಾನಿಕತೆಗೆ ಮನ್ನಣೆ ಇದ್ದರೂ ಕಾಲ ಗತಿಸಿದಂತೆ ಸಮಾಜವು ತರ್ಕರಹಿತ ಶಕ್ತಿಗಳ ಕೈಯಲ್ಲಿ ಸಿಕ್ಕು ವಿವೇಕವಿಲ್ಲದ ವರ್ತನೆಗಳನ್ನು ಪ್ರದರ್ಶಿಸುತ್ತಾ ಬಂದಿದೆ. ವಿವೇಕವಿಲ್ಲದ ವ್ಯಕ್ತಿಗಳು ಧಾರ್ಮಿಕ ಮತ್ತು ರಾಜಕೀಯ ವಲಯಗಳ ಪ್ರವೇಶ ಮಾಡಿದರೆ ಸಮಾಜಗಳು ಇನ್ನೂ ಹೆಚ್ಚಿನ ಹುಚ್ಚುತನವನ್ನು ಪ್ರದರ್ಶಿಸುತ್ತವೆ. ಕಳೆದ ಒಂದುವರೆ ವರ್ಷಗಳಿಂದ ನಮ್ಮ ದೇಶದಲ್ಲಿ ನಡೆದಿರುವುದು ಇದೇ.

ಕೊರೋನ ಎರಡನೇ ಅಲೆಯ ಭಯಭೀತ ಸಮಯದಲ್ಲಿ ಮತ್ತು ಅದಕ್ಕೂ ಮುಂಚೆಯಿಂದ ದೇಶದ ಕೆಲವು ರಾಜಕೀಯ ಮತ್ತು ಧಾರ್ಮಿಕ ಧುರೀಣರು ರೋಗ ಪರಿಹಾರಕ್ಕೆ ತಮ್ಮ ಉಪಾಯಗಳನ್ನು ಬಹಿರಂಗವಾಗಿ ಸೂಚಿಸುತ್ತಾ ಮುಗ್ಧ ಜನರನ್ನು ದಾರಿ ತಪ್ಪಿಸಿದಾಗ ನಮ್ಮ ಒಕ್ಕೂಟ ಸರ್ಕಾರವು ಇವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳದೆ ತನ್ನ ಬೇಜವಾಬ್ದಾರಿತನವನ್ನು ಪ್ರದರ್ಶಿಸಿತು. ಕೊರೋನಕ್ಕೆ ಪರಿಹಾರಗಳಾಗಿ ಗೋಮೂತ್ರ ಸೇವನೆ, ಸೆಗಣಿ ಲೇಪಿಸಿಕೊಂಡು ಸ್ನಾನ, ಇತ್ಯಾದಿಗಳನ್ನು ಅನೇಕರು ಅತಿ ಆತ್ಮವಿಶ್ವಾಸದಿಂದ ಹೇಳುತ್ತಿದ್ದಾಗ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದೆ ಭಾಜಪ ಸರ್ಕಾರವು ತನ್ನ ಬೇಜವಾಬ್ದಾರಿತನ ತೋರಿಸಿ ಜನರಲ್ಲಿ ಹುಸಿ ವಿಧಾನಗಳನ್ನೂ ನಂಬುವಂತೆ ಅಪರೋಕ್ಷವಾಗಿ ಹೊಣೆಗೇಡಿತನಕ್ಕೆ ಪಾತ್ರವಾಯಿತು. ಬಾಬಾ ರಾಮದೇವ ಕೊರೋನ ರೋಗಕ್ಕೆ ಪರಿಹಾರವೆಂದು ತಮ್ಮದೇ ಔಷಧಿಯನ್ನು ಹೊರತಂದು ಪ್ರಚಾರ ಗಿಟ್ಟಿಸಿಕಂಡರು. ಅದಲ್ಲದೆ, ಅಲೋಪತಿ ವೈದ್ಯಕೀಯ ವಿಜ್ಞಾನದ ಔಷಧಿಗಳನ್ನು ಕಟುವಾಗಿ ವಿಮರ್ಶಿಸಿದರು. ಹೀಗಾದರೂ ಭಾಜಪ ಸರ್ಕಾರವು ಇವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಿಲ್ಲ.

ಚುನಾವಣೆಗಳು, ಅಧಿಕಾರ, ಮತ್ತು ಸಂದಿಗ್ಧ ಪರಸ್ಥಿತಿ: ಚುನಾವಣೆಗಳಿಗೆ ಕೊಟ್ಟ ಗಮನ ಮತ್ತು ಪ್ರಾಮುಖ್ಯತೆ ವೈದ್ಯಕೀಯ ಸೌಕರ್ಯಗಳಿಗೂ ಕೊಟ್ಟಿದ್ದರೆ ಕೊರೋನದ ಎರಡನೇ ಅಲೆಯಿಂದ ಆಗಿರುವ ಸಾವು–ನೋವುಗಳನ್ನು ನಾವು ಬಹುಮಟ್ಟಿಗೆ ತಪ್ಪಿಸಬಹುದಾಗಿತ್ತು. ಜನಜೀವನದ ಮೇಲೆ ಕೊರೋನ ರೋಗಕ್ಕೆ ಸಂಬಂಧಿಸಿದ ಪರಿಣಾಮಗಳಿಗೆ ಒಕ್ಕೂಟ ಸರ್ಕಾರ ಮತ್ತು ಹಲವು ರಾಜ್ಯ ಸರ್ಕಾರಗಳು ಗಂಭೀರವಾಗಿ ಸ್ಪಂದಿಸದೆ ಅಧಿಕಾರ ಮೋಹದ ರಾಜಕೀಯವನ್ನು ಮಾಡುತ್ತಿವೆ. ಇಂತಹ ಸಂದಿಗ್ಧ ಸಮಯದಲ್ಲಿಯೂ ಆಡಳಿತ ಪಕ್ಷಗಳು ಜನಪರ ರಾಜಕೀಯ ಮಾಡುತ್ತಿಲ್ಲ ಎಂದು ಹೇಳುವುದಕ್ಕೆ ಇತ್ತೀಚಿಗೆ ಕರ್ನಾಟಕದಲ್ಲಿ ನಡೆದ ಮುಖ್ಯಮಂತ್ರಿ ಬದಲಾವಣೆಯ ಉದಾಹರಣೆಯನ್ನು ಕೊಡಬಹುದು.

ಮೋದಿ ಮತ್ತು ಅಮಿತ್ ಶಾ ನೇತೃತ್ವದ ಭಾಜಪ ಸರ್ಕಾರಕ್ಕೆ ವಿವಿಧ ರಾಜ್ಯಗಳಲ್ಲಿ ನಡೆಯಬೇಕಾದ ಚುನಾವಣೆಗಳು ಬಹು ಮುಖ್ಯವಾದವು. ಪಶ್ಚಿಮ ಬಂಗಾಲದ ವಿಧಾನಸಭಾ ಚುನಾವಣೆಯಲ್ಲಿ ಇವರಿಬ್ಬರು ಚುನಾವಣಾ ಪ್ರಚಾರದಲ್ಲಿ ಅತಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಾವಿರಾರು ಜನರನ್ನೊಳಗೊಂಡ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಾ ಕೊರೋನ ರೋಗದ ವಿಚಾರದ ಕುರಿತು ಎಚ್ಚರಿಕೆ ಮತ್ತು ಮುಂಜಾಗ್ರತೆ ವಹಿಸಲಿಲ್ಲ. ಈ ಮಾತು ಎಲ್ಲ ಪಕ್ಷದ ನಾಯಕರುಗಳಿಗೆ ಅನ್ವಯವಾದರೂ, ದೇಶದ ನಾಯಕತ್ವವನ್ನು ವಹಿಸಿಕೊಂಡವರು ಹೆಚ್ಚಿನ ಜಾಗೃತಿ ಮತ್ತು ಹೊಣೆಗಾರಿಕೆಯನ್ನು ತೋರಿಸಬೇಕಾಗಿತ್ತು. ಒಟ್ಟಾರೆ ಹೇಳುವುದಾದರೆ, ಇವರಿಗೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಚುನಾವಣೆಗಳು ಮುಖ್ಯವಾದವೇ ಹೊರತು ಜನಜೀವನವಲ್ಲ. ಅಧಿಕಾರಕ್ಕಾಗಿ ಹಲವು ರಾಜಕೀಯ ಸುಳ್ಳುಗಳನ್ನು ಹೇಳಿ, ವಿವಿಧ ತರಹದ ರಾಜಕೀಯ ನಾಟಕವನ್ನಾಡಿ ಕೋಮು ಸಾಮರಸ್ಯವನ್ನು ಕಾಪಾಡಿಕೊಂಡು ಬಂದಿರುವ ಬಂಗಾಲದಂತಹ ರಾಜ್ಯಗಳಲ್ಲಿ ಸಾಮರಸ್ಯ ಕೆಡಿಸುವುದರಲ್ಲಿ ಅವರು ಹೆಚ್ಚಿನ ಪಾತ್ರ ವಹಿಸಿದರು.

ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಭಾಜಪ ನಾಯಕರು ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕೊರೋನ ರೋಗಕ್ಕಾಗಿ ಉಚಿತ ಲಸಿಕೆಯನ್ನು ಒದಗಿಸುವ ಭರವಸೆಯನ್ನು ಕೊಟ್ಟರು. ಕೊರೋನಕ್ಕಿಂತ ಮುಂಚೆಯೂ ದೇಶದಲ್ಲಿ ಅನೇಕ ರೋಗಗಳನ್ನು ನಿಯಂತ್ರಿಸಲು ಸರ್ಕಾರಗಳು ಉಚಿತ ಲಸಿಕೆಯನ್ನು ಒದಗಿಸಿವೆ. ರಾಜಕೀಯ ಲಾಭ ಪಡೆಯಲು ಬಾಜಪ ಸರ್ಕಾರವು ಲಸಿಕೆ ವಿಚಾರವಾಗಿ ರಾಜಕೀಯಕರಣ ಮಾಡಿರುವಷ್ಟು ಮೊದಲಿನ ಯಾವ ಸರ್ಕಾರವೂ ಮಾಡಿರಲಿಲ್ಲ. ಭಾಜಪವು ಮತದಾರರನ್ನು ತಮ್ಮ ಮನೆಯಲ್ಲಿ ದುಡಿಯುವ ಕಾರ್ಮಿಕರಂತೆ ತಿಳಿದು ತನ್ನ ಸಾಹುಕಾರಗಿರಿಯನ್ನು ತೋರಿಸಿತು ಎಂದು ಅರ್ಥೈಸಬಹುದು. ಲಸಿಕೆಯಂತಹ ವೈದ್ಯಕೀಯ ಸೌಕರ್ಯಗಳು

ಒದಗಿಸುವುದು ಸರ್ಕಾರಗಳ ಕರ್ತವ್ಯವಾದರೆ, ಆ ಸೌಕರ್ಯಗಳನ್ನು ಬೇಡುವುದು ಪ್ರತಿ ನಾಗರಿಕನ ಅರೋಗ್ಯದ ಹಕ್ಕಾಗಿದೆ. ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳು ವೈದ್ಯಕೀಯ ಸೌಕರ್ಯಗಳನ್ನು ಪ್ರತಿಯೊಬ್ಬ ನಾಗರಿಕನ ಆರೋಗ್ಯ ಹಕ್ಕಿನ ಭಾಗವೆಂದು ತಿಳಿದು ತಮ್ಮ ಸಾಹುಕಾರಗಿರಿಯನ್ನು ನಿಲ್ಲಿಸಬೇಕು.

ರಾಜಕೀಯ ಸುಳ್ಳುಗಳನ್ನು ಪ್ರಜ್ಞಾವಂತ ಮತದಾರರು ಒಪ್ಪಿಕೊಳ್ಳುವುದಿಲ್ಲ ಎಂಬುವುದಕ್ಕೆ ಇತ್ತೀಚಿಗೆ ಕೆಲವು ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆ ಫಲಿತಾಂಶವನ್ನು ನೋಡಿ ಅರ್ಥಮಾಡಿಕೊಳ್ಳಬಹುದು. ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರು ಮತ್ತು ಪ್ರಧಾನಮಂತ್ರಿಗಳು ಚುನಾವಣಾ ಪ್ರಚಾರದ ಭಾಷಣಗಳಲ್ಲಿ ಅಲ್ಲಿಯ ಜನರನ್ನು ಹಲವು ಸುಳ್ಳುಗಳನ್ನು ಹೇಳಿ ಮನವೊಲಿಸುವ ಪ್ರಯತ್ನವನ್ನು ಮಾಡಿದರು. ಅವರು ಹೇಳಿದ ಸುಳ್ಳುಗಳನ್ನು ನಂಬದೆ ತಮ್ಮ ರಾಜ್ಯ ಮತ್ತು ಜನತೆಗೆ ಯಾವುದು ಒಳ್ಳೆಯದು ಎಂದು ಅರಿತ ಮತದಾರರು ಸುಳ್ಳಿನ ರಾಜಕೀಯವನ್ನು ಹೀನಾಯವಾಗಿ ಸೋಲಿಸಿದರು. ಪಶ್ಚಿಮ ಬಂಗಾಲ, ತಮಿಳುನಾಡು ಮತ್ತು ಕೇರಳದ ಮತದಾರರು ರಾಜಕೀಯ ಸುಳ್ಳುಗಳಿಗೆ ಬಲಿಯಾಗದೆ ನಿರ್ಣಾಯಕ ಫಲಿತಾಂಶವನ್ನು ಕೊಟ್ಟರು. ಭಾಜಪದ ಮತ್ತು ಮೋದಿಯವರ ಭಕ್ತಲೋಕದಲ್ಲಿರುವ ನಮ್ಮದೇ ಸಹೋದರ, ಸಹೋದರಿಯರು ತಮ್ಮ ನಾಯಕ ಮತ್ತು ಸರ್ಕಾರದ ಬಗ್ಗೆ ಮಾಡುತ್ತಿದ್ದ ವಿಜೃಂಭಣೆ ಕಳೆದ ಕೆಲವು ತಿಂಗಳುಗಳಿಂದ ಅಷ್ಟೊಂದು ನಡೆಯುತ್ತಿಲ್ಲ. ಅವರಲ್ಲಿಯೂ ಕೂಡ ಅವರ ನಾಯಕನ ಮತ್ತು ಸರ್ಕಾರದ ಕಾರ್ಯಕ್ಷಮತೆಯ ಬಗ್ಗೆ ಸಂಶಯ ಬಂದಿರಬೇಕು. ಇವರೆಲ್ಲರು ಇನ್ನೂ ಜಾಸ್ತಿ ವಿವೇಕಿಗಳಾಗಿ ಮರಳಿ ನಮ್ಮ ಸಾಮರಸ್ಯದ, ಜಾತ್ಯಾತೀತ ಮನೆಗೆ ಬರುತ್ತಾರೆಂದು ನಾವೆಲ್ಲಾ ನಂಬಿಕೆಯಿಂದ ನಿರೀಕ್ಷೆ ಮಾಡೋಣ. ಮೂರನೇ ಅಲೆಯ ಬಗ್ಗೆ ಈಗಾಗಲೆ ಅನೇಕ ಸುದ್ದಿ-ಸಮಾಚಾರಗಳನ್ನು ತಿಳಿದುಕೊಳ್ಳಲಾಗಿದೆ. ಜನರಲ್ಲಿ ಇದರ ಬಗ್ಗೆ ಬಹಳಷ್ಟು ಭಯವಿದೆ. ಆದರೆ ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದರೆ ಒಕ್ಕೂಟ ಸರ್ಕಾರವು ಮತ್ತು ಹಲವು ರಾಜ್ಯ ಸರ್ಕಾರಗಳು ಇದರ ಬಗ್ಗೆ ಅಷ್ಟೊಂದು ಗಂಭೀರವಾಗಿ ಪರಿಗಣಿಸಿಲ್ಲ ಎಂದೆನಿಸುತ್ತದೆ. ಕೆಲವು ರಾಜ್ಯಗಳಲ್ಲಿ ಮುಂಬರುವ ಚುನಾವಣೆಗಳಿಗೆ ಕೊಡುವ ಪ್ರಾಮುಖ್ಯತೆ ಕೊರೋನದಿಂದ ಆಗುವ ಸಮಸ್ಯೆಗಳಿಗೆ ಕೊಡುತ್ತಿಲ್ಲ ಎಂದು ಕಂಡುಬರುತ್ತದೆ.

# ಕತ್ತಲೆಯ ಜನ

ಕಾಲ ಬದಲಾಗಿದೆ
ವಿಶ್ವ ಚಿಕ್ಕದಾಗಿದೆ
ದೇಶದ ಸ್ವಾತಂತ್ರ್ಯಕ್ಕೆ
ಅಮೃತ ಮಹೋತ್ಸವ ಆಗಲಿದೆ:

ಆದರೂ ಬಡತನ ತಪ್ಪಿಲ್ಲ
ಭ್ರಷ್ಟಾಚಾರ ಸೊರಗಿಲ್ಲ
ನಿರುದ್ಯೋಗ ಸಮಸ್ಯೆ ಇನ್ನೂ ತಗ್ಗಿಲ್ಲ!

ಕತ್ತಲಲ್ಲಿ ಹುಟ್ಟಿ
ಕತ್ತಲಲ್ಲಿ ಬೆಳೆದು
ಕತ್ತಲಲ್ಲೇ ಕರಗುವ ಜನರ
ಶೋಷಣೆ ಇನ್ನೂ ನಿಂತಿಲ್ಲ
ಹರಕು ಚಾಪೆ, ಬಣ್ಣದ ತ್ಯಾಪೆ
ಅವರನ್ನು ಬಿಟ್ಟು ದೂರ ಹೋಗಿಲ್ಲ!

ಸಮಾನತೆ, ಸಮಬಾಳು
ಸಮಾಧಿಯಲ್ಲಿ ಸುಖವಾಗಿದೆ
ಅದಕ್ಕೆ ಎಚ್ಚರಿಸಿದರೂ
ಎಚ್ಚರವಾಗದ ಗಾಢ ನಿದ್ದೆಯಲ್ಲಿದೆ!

ಕತ್ತಲೆಯ ಜನ
ಒಂದಿಲ್ಲ ಒಂದು ದಿನ
ತುಳಿತದಿಂದ ಸಿಡಿದು, ಒಟ್ಟಿಗೆ ಬೆರೆತು
ಬೆಳಕಿಗಾಗಿ ಸ್ಫೋಟಗೊಂಡಾಗ
ಎಚ್ಚರಗೊಳ್ಳಬಹುದೇನೋ.... ಆಗ!!

**ಎಚ್.ಕೆ. ಕೊಟ್ರಪ್ಪ, ಹರಿಹರ**